ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ, ಮೈಸೂರು.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಚಾ.ವಿ.ಸ.ನಿ.ನಿ., ಹುಣಸೂರು
ದೂರವಾಣಿ/ಫ್ಯಾಕ್ಸ್ ಸಂಖ್ಯೆ: 08222-252056
ಮೊಬೈಲ್ ಸಂಖ್ಯೆ : 9448994806

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
Office of: Assistant Executive Engineer
O & M Sub Division, Hunsur
Web site. www.cescmysore.org
email.aeehunsur@rediffmail.com

Company Identity Number (CIN) : U40109KA2004SGC035177

ಕ್ರಮಾಂಕ: ಸಕಾನಿಇಂ(ವಿ)/ಸಕ್ಕ/ಉವಿ/ಹುಣ/23-24/ 5842    ದಿನಾಂಕ: 29-12-2023.

ದಿನಾಂಕ 27-12-2023 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಶ್ರೀ ಸುನೀಲ್ ಕುಮಾರ್ ಎ.ಪಿ. ಅಧೀಕ್ಷಕ ಇಂಜಿನಿಯರ್(ವಿ) . ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ ಮೈಸೂರು ರವರ ಅನುಪಸ್ಥಿತಿಯಲ್ಲಿ ಶ್ರೀ ಮಹೇಶ್ ಕುಮಾರ್ ಕಾರ್ಯನಿರ್ವಾಹಕ ಇಂಜಿನಿಯರ್(ವಿ).ಕಾರ್ಯ ಮತ್ತು ಪಾಲನ ವಿಭಾಗ ಚಾ.ವಿ.ಸ.ನಿ.ನಿ ಹುಣಸೂರು, ರವರ ಅಧ್ಯಕ್ಷತೆಯಲ್ಲಿ ನಡೆದ ಹುಣಸೂರು ಕಾರ್ಯ ಮತ್ತು ಪಲನಾ ಉಪವಿಭಾಗದ ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಮಹೇಶ್ ಕುಮಾರ್ ಕಾರ್ಯನಿರ್ವಾಹಕ ಇಂಜಿನಿಯರ್(ವಿ).ಕಾರ್ಯ ಮತ್ತು ಪಾಲನ ವಿಭಾಗ ಚಾ.ವಿ.ಸ.ನಿ.ನಿ ಹುಣಸೂರು.
2. ಶ್ರೀ ಸಿದ್ದಪ್ಪ ರವರು, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
3. ಶ್ರೀಮತಿ ಯಶಸ್ವಿನಿ ಆರ್ ಶೇಖರ್. ಪ್ರಭಾರ ಸಹಾಯಕ ಇಂಜಿನಿಯರ್(ತಾ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು.
4. ಶ್ರೀ ಪ್ರಶಾಂತ್. ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ, ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು.
5. ಶ್ರೀ ಸೋಮಶೇಖರ್. ಸಹಾಯಕ ಇಂಜಿನಿಯರ್(ವಿ). ಪಟ್ಟಣ ಶಾಖೆ ಹುಣಸೂರು.
6. ಶ್ರೀ ರವಿ ಎಸ್. ಪ್ರಭಾರ ಕಿರಿಯ ಇಂಜಿನಿಯರ್, ಶಾಖಾಧಿಕಾರಿಗಳು ಬಿಳ್ಕುಂದ ಶಾಖೆ.
7. ಶ್ರೀ ಸೈಯದ್ ಗೌಸ್. ಕಿರಿಯ ಇಂಜಿನಿಯರ್, ಶಾಖಾಧಿಕಾರಿಗಳು ಗೋವಿಂದನಳ್ಳಿ ಶಾಖೆ.
8. ಶ್ರೀ ವಿಜಯಕುಮಾರ್, ಪ್ರಭಾರ ಕಿರಿಯ ಇಂಜಿನಿಯರ್ (ವಿ), ಶಾಖಾಧಿಕಾರಿಗಳು ಹನಗೂಡು ಶಾಖೆ.
9. ಶ್ರೀ .ಸುಕ್ರುತ್ ಎಸ್. ಕಿರಿಯ ಇಂಜಿನಿಯರ್, ಶಾಖಾಧಿಕಾರಿಗಳು ಗಾವಡಗೆರೆ ಶಾಖೆ.
10. ಶ್ರೀ ಪ್ರಸನ್ನ ಕುಮಾರ್, ಕಿರಿಯ ಇಂಜಿನಿಯರ್ (ವಿ), ಶಾಖಾಧಿಕಾರಿಗಳು ರತ್ನಪುರಿ ಶಾಖೆ.

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದಂತೆ ಪ್ರತಿ ತಿಂಗಳ ಮೂರನೆ ಶನಿವಾರದ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆಂದು ಸಭೆಗೆ ತಿಳಿಸಿದರು.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಶ್ರೀ ಜವರೇಗೌಡ ಹನಗೋಡು | ಹೊಸದಾಗಿ ಕೊರೆಸಿರುವ ಬೋರ್ ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಸರ್ಕಾರದ ಆದೇಶವನ್ನು ಮನವರಿಕೆ ಮಾಡಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ. |

ಮು.ಹಿ.ನೋ

| | | | |
|---|---|---|---|
| 2. | ಶ್ರೀ ಶಿರಿಗೌಡ ವಡ್ಡಂಬಾಲು | ಪರಿವರ್ತಕವನ್ನು ಸ್ಥಳಾಂತರಿಸುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಹನಗೋಡು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ತಿಳಿಸಿರುತ್ತಾರೆ. |
| 3. | ಶ್ರೀ ಗಣೇಶ್ ವಡ್ಡಂಬಾಲು | ಕಂಬವನ್ನು ಬದಲಾಯಿಸಿ ಕೊಡುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಹನಗೋಡು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ತಿಳಿಸಿರುತ್ತಾರೆ. |
| 4. | ಶ್ರೀ ಹೂಬನಾಯಿಕ, ಕಟ್ಟೆಮಳಲವಾಡಿ | ಹೊಸದಾಗಿ ಕೊರೆಸಿರುವ ಬೋರ್ ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಸರ್ಕಾರದ ಆದೇಶವನ್ನು ಮನವರಿಕೆ ಮಾಡಲು ಶಾಕಾಧಿಕಾರಿಗಳಿಗೆ ಸೂಚಿಸಿರುತ್ತಾರೆ. |
| 5. | ಶ್ರೀ ಮಹದೇವು ಬಿಲ್ಲುಂದ | ಕಂಬವನ್ನು ಬದಲಾಯಿಸಿ ಕೊಡುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಹನಗೋಡು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ತಿಳಿಸಿರುತ್ತಾರೆ. |
| 6. | ಶ್ರೀ ಮಹದೇವು ತಟ್ಟಕೆರೆ | ಕಂಬವನ್ನು ಬದಲಾಯಿಸಿ ಕೊಡುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಹನಗೋಡು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ತಿಳಿಸಿರುತ್ತಾರೆ. |

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ).ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಬಂಧಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ :- 16

ಮೌಖಿಕ ದೂರುಗಳ ಸಂಖ್ಯೆ :- 6

ಪತ್ರ ಲಿಖಿತ ದೂರುಗಳ ಸಂಖ್ಯೆ :- 0

ತಮ್ಮ ವಿಶ್ವಾಸಿ,

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಹುಣಸೂರು.

ಪ್ರತಿಗಳು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.